ಕುರುಡನೊಬ್ಬನು ರಸ್ತೆಯನ್ನು ದಾಟಲು ತುಂಬಾ ಕಷ್ಟ ಪಡುತ್ತಿದ್ದನು. ಆದರೆ ರಾಜು ಅವನ ಸಹಾಯಕ್ಕೆ ಹೋಗದೆ ಕಂಡೂ ಕಾಣದಂತೆನೇರವಾಗಿ ಶಾಲೆಗೆ ಹೋದನು.

**a. i) ರಾಜುವಿನ ವರ್ತನೆ ಸರಿಯೆ?**

**ii) ಏಕೆ?**

**b. i) ನೀನು ರಾಜುವಿನ ಸ್ಥಾನದಲ್ಲಿ ಇರುತ್ತಿದ್ದರೆ ಏನು ಮಾಡುತ್ತಿದ್ದಿ?**

**ii) ಏಕೆ?**

**c. i) ಸಂವೇದನಾಶೀಲತೆ ಎಂದರೇನು?**

**ii) ರಾಜುವಿಗೆ ಆ ಕುರುಡನ ಬಗ್ಗೆ ಸಂವೇದನಾಶೀಲತೆ ಇತ್ತೇ?**

2. ರವಿಯು 9ನೇ ತರಗತಿಯ ವಿದ್ಯಾರ್ಥಿ. ಅವನು ಪ್ರಾಥಮಿಕ ಶಾಲೆಯ ಕ್ಲಾಸ್‌ಗಳಲ್ಲಿ ಚೆನ್ನಾಗಿ ಓದುತ್ತಿದ್ದನು. ಆದರೆ ಪ್ರೌಢಶಾಲೆಗೆ ತಲುಪಿದಾಗ ಅವನಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಯಿತು ಮತ್ತು ಆಟೋಟ, ಸಿನಮಾ, ಸಾಹಸ ಕಾರ್ಯಗಳು ಮತ್ತು ಹುಡುಗಿಯರ ಗೆಳತನ ಮಿತಿಮೀರಿ ಬೆಳೆಸುವುದರಲ್ಲಿ ಆಸಕ್ತಿ ಹೆಚ್ಚಿತು. ಇದರಿಂದ ಅವನ ಸಮಯವು ವ್ಯರ್ಥಗೊಳ್ಳುವುದರೊಂದಿಗೆ ಆತನ ವಿದ್ಯಾರ್ಜನೆಯು ಕುಂಠಿತವಾಯಿತು. ರವಿಯ ಹೆತ್ತವರು ಉದ್ಯೋಗಸ್ಥರಾಗಿದ್ದುದರಿಂದ ಅವರಿಗೆ ರವಿಯ ಬಗ್ಗೆ ಕಾಳಜಿ ವಹಿಸಲು ಸಮಯವು ದೊರೆಯುತ್ತಿರಲಿಲ್ಲ.

**a. i) ರವಿಯು ಮಾಡುತ್ತಿರುವ ಹವ್ಯಾಸಗಳು ಸರಿಯೇ?**

**ii) ಏಕೆ?**

**b. ರವಿಗೆ ಕಲಿಯುವಿಕೆಯಲ್ಲಿ ಉತ್ಸಾಹ ಕಡಿಮೆಯಾಗಲು ಕಾರಣಗಳೇನಿರಬಹುದು? ಎರಡು ಕಾರಣ ಕೊಡು.**

**c. ನೀನು ರವಿಯ ಗೆಳೆಯನಾಗಿದ್ದರೆ, ರವಿಗೆ ಆತನ ವರ್ತನೆಯನ್ನು ತಿದ್ದಿಕೊಳ್ಳಲು ಹೇಗೆ ಸಹಾಯ ಮಾಡುವಿ.**

3. ಗೀತ ಮತ್ತು ಪ್ರಮಿತ ಉತ್ತಮ ಗೆಳತಿಯರು ಇಬ್ಬರು ಬಹಳ ಚುರುಕು ಬುದ್ಧಿಯವರಾಗಿದ್ದರು. ಆದರೆ ಅವರಲ್ಲಿ ಗೀತ ಎಲ್ಲಾ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಳು. ಆದರೆ ಪ್ರಮಿತ ಮಾತ್ರ ಬರೀ ಓದಿನಲ್ಲಿಯೇ ಕಾಲ ಕಳೆಯುತ್ತಾ 90% ಮಾರ್ಕ್ಸ್ ಪಡೆಯುತ್ತಿದ್ದಳು ಯಾಕೆ ಹೀಗೆ ಎಂದು ಪ್ರಮಿತನಲ್ಲಿ ಕೇಳಿದಾಗ ಆಕೆ ಹೇಳುತ್ತಿದ್ದಳು "ಬರೀ ಉತ್ತಮ ಅಂಕಗಳಿಂದ ಮಾತ್ರ ಉತ್ತಮ ಕೆಲಸ ದೊರೆಯುವುದು.

**a. i) ಪ್ರಮಿತಳ ನಿರ್ಧಾರ ಸರಿಯೇ?**

**ii) ಏಕೆ?**

**b. ಪಠ್ಯೇತರ ಚಟುವಟಿಕೆಗಳ ಪ್ರಾಮುಖ್ಯತೆ ಏನು? ವಿವರಿಸು.**

**a. i) ಉನ್ನತ ವ್ಯಾಸಂಗ ಮತ್ತು ಉದ್ಯೋಗ ಗಳಿಸುವಲ್ಲಿ ಪಠ್ಯೇತರ ಚಟುವಟಿಕೆಗಳು ಉಪಯೋಗಕ್ಕೆ ಬರುವುದೇ?**

**ii) ಹೇಗೆ?**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 07–01–2017** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ನಾವು ಸಂಬಂಧವನ್ನು ಇಟ್ಟಿಕೊಂಡಿರುವ ಮಾನವ ಜೀವಿಗಳ ಪ್ರಜ್ಞೆಯು ________ ಆಗಿರುತ್ತದೆ.

   (ಸಾಮಾಜಿಕ ಪ್ರಜ್ಞೆ, ಸಂಸ್ಥೆ, ಆರ್ಥಿಕ ವ್ಯವಸ್ಥೆ)

2. ಸಂವೇದನಾಶೀಲತೆಯು ಏಕಾಗ್ರತೆಯಿಂದ ________ ಅಡಗಿದೆ.

   (ನೋಡುವುದರಲ್ಲಿ, ಕಲಿಯುವುದರಲ್ಲಿ, ಆಲಿಸುವುದರಲ್ಲಿ)

3. ________ ಇವೆರಡು ಗೆಳತನದ ಎರಡು ಕಂಬಗಳು.

   (ಪ್ರೀತಿ–ನಂಬಿಕೆ, ಸಲಹೆ–ಸಹಾಯ, ಪ್ರೀತಿ –ಹಂಚಿಕೊಳ್ಳುವಿಕೆ)

4. ________ ಹಂತದಲ್ಲಿ ಹುಟ್ಟಿದ ಜನರು ಸುಲಭವಾಗಿ ಮರೆತು ಹೋಗುವುದಿಲ್ಲ.

   (ಜೈವಿಕ ಜನನ, ಗಳಿಕೆಯ ಜನನ, ಆಧ್ಯಾತ್ಮಿಕ ಜನನ)

5. ________ ಧೈರ್ಯದಿಂದ ತೀರ್ಮಾನ ಕೈಗೊಳ್ಳಲು ಬದಲಾವಣೆಯನ್ನು ತರಲೂ ಅವಕಾಶ ಮಾಡಿಕೊಡುತ್ತದೆ.

   (ನೈತಿಕಬಲ, ನಿಷ್ಪಕ್ಷಪಾತ, ನಿರ್ಧಾರ ಕೈಗೊಳ್ಳುವಿಕೆ)

6. ಘನತೆ ಮತ್ತು ________ ದಿಂದ ಒಬ್ಬ ವ್ಯಕ್ತಿಯಾಗಿ ಜೀವಿಸಲು ಪ್ರತೀ ಸ್ತ್ರೀ ಪುರುಷನಿಗೆ ಮಾನವ ಹಕ್ಕುಗಳು ಅಗತ್ಯ.

   (ಸ್ವಸಹಾಯ, ಸ್ವಾಭಿಮಾನ, ಮಾನವೀಯತೆ)

7. ಒಂದು ವರ್ಷಕ್ಕೆ ಬೆಲೆ ಕಟ್ಟಲು ಒಬ್ಬ ________ ಯನ್ನು ಕೇಳಿ.

   (ತಾಯಿ, ವಿದ್ಯಾರ್ಥಿ, ನ್ಯಾಯಾವಾದಿ)

8. ಡಾ.ಬಿ.ಆರ್ ಅಂಬೇಡ್ಕರ್________ ವ್ಯಕ್ತಿ.

   (ಸ್ವಯಂಕೃತ, ಪ್ರತಿಭಾನ್ವಿತ, ಆಧ್ಯಾತ್ಮಿಕ)

9. ಸಾರ್ವತ್ರಿಕವಾದ ಎಂದರೆ ಇತರರ ________ ಯನ್ನು ಗೌರವಿಸುವುದು ಎಂದು ಅರ್ಥ.

   (ವ್ಯಕ್ತಿ ಗೌರವ, ಸಂಪ್ರದಾಯ ಸಂಸ್ಕೃತಿ, ಹಕ್ಕುಬಾಧ್ಯತೆ)

10. ಯಾವ ಸಂಸ್ಕೃತಿ, ಧರ್ಮ ಮತ್ತು ಸಾಮಾಜಿಕ ಅಂತಸ್ತಿಗೆ ಸೇರಿದ್ದರೂ ಒಬ್ಬ ವ್ಯಕ್ತಿಯನ್ನು ಗೌರವದಿಂದ ಕಾಣುವುದನ್ನು ______________ ಜೀವನ ಎನ್ನುವರು.

(ಮಾನವ ಘನತೆ ಮತ್ತು ಹಕ್ಕುಗಳ, ಮಾನವೀಯ ಮೌಲ್ಯ, ಮಾನವೀಯ ಗೌರವ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ಮಾನವ ಕುಟುಂಬದಿಂದ ನಮ್ಮನ್ನೇ ಪ್ರತ್ಯೇಕಿಸಿಕೊಂಡರೆ ______________ ತೊಡಕಿಗೆ ಸಿಲುಕಿಕೊಳ್ಳುತ್ತೇವೆ.
2. ಸಂವೇದನಾಶೀಲತೆ ______________ ವಾಗಿರಲು ಅವಕಾಶ ಮಾಡಿಕೊಡುತ್ತದೆ.
3. ______________ ಅಪರೂಪದ ಸಂಪನ್ಮೂಲ ಎನ್ನುತ್ತಾರೆ.
4. ______________ ಒಬ್ಬರ ವ್ಯಕ್ತಿತ್ವವನ್ನು ಬೆಳೆಸುತ್ತದೆ ಮತ್ತು ಇತರರು ಎಲ್ಲ ರಂಗಗಳಲ್ಲೂ ಪ್ರಗತಿ ಸಾಧಿಸಲು ಸಹಾಯಕವಾಗುತ್ತದೆ.
5. ______________ ಜನನವು ನಮ್ಮ ಗಾತ್ರ ಎತ್ತರ, ತೂಕ, ಬಣ್ಣ ಮತ್ತು ದೈಹಿಕ ರಚನೆಯನ್ನು ನಿರ್ಧರಿಸುತ್ತದೆ.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಬರೆಯುವ ಮೊದಲು : **ಯೋಚಿಸು** :: ಮಾತನಾಡುವ ಮೊದಲು : ________
2. ಅತ್ಯುತ್ತಮ ಆಭರಣ : **ದೀನತೆ** :: ಸಂಪದ್ಭರಿತ ಐಶ್ವರ್ಯ : ________
3. ಖರ್ಚು ಮಾಡುವ ಮೊದಲು : **ಸಂಪಾದಿಸು** :: ಟೀಕಿಸುವ ಮೊದಲು : ______
4. ನಿನ್ನೆ ಎಂಬುದು : **ರದ್ದು ಮಾಡಿದ ಚೆಕ್ಕು** :: ಇಂದು ಎಂಬುದು : _______
5. ದೀನತೆ ಒಂದು : **ಆಧ್ಯಾತ್ಮಿಕತೆ** :: ಗೆಳತನ : _________

**IV. ಹೊಂದಿಸಿ ಬರೆಯಿರಿ: 5x1=5**

1. ಪ್ರತಿಯೊಬ್ಬನ ಹಕ್ಕು – ದೀನತೆ ಬೇಕು
2. ಗೆಳೆಯರು – ಸಕ್ರೀಯವಾಗಿ ನಿರ್ಧರಿಸುವ ಕೌಶಲ್ಯ
3. ನಿನ್ನ ತಪ್ಪನ್ನು ಒಪ್ಪಿಕೊಳ್ಳು – ಎಂದೆಂದೂ ಜೊತೆಯಲ್ಲಿರುತ್ತಾರೆ.
4. ಮುಖಂಡನ ಲಕ್ಷಣ – ಯಶಸ್ಸಿನ ಬೆಲೆ ಅದು
5. ಕೆಲಸಕ್ಕೆ ಸಮಯವಿರಲಿ – ಕಾನೂನಿನ ದೃಷ್ಟಿಯಲ್ಲಿ ಸಮಾನವಾಗಿ ಆಧರಿಸುವುದು

**V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ದೀನತೆ ಎಂದರೇನು
2. ಪರ ಸಂವೇದನಾ ಶೀಲತೆ ಎಂದರೇನು?
3. ಬಹುರೂಪಿ ಸಮಾಜ ಎಂದರೇನು?



4. ಮಾನವ ಹಕ್ಕುಗಳು ಎಂದರೇನು?
5. ಸಾಮಾಜಿಕ ಪರಿಜ್ಞಾನ ಎಂದರೇನು?

**VI. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ದೀನತೆ ಒಂದು ವಿಧವಾದ ಆಧ್ಯಾತ್ಮಿಕತೆ ವಿವರಿಸಿರಿ.
2. ಮುಖಂಡನ ಮೂಲಗಳ ಯಾವುವು?
3. ಸಂವೇದಿಸುತ್ತಿರುವಾಗ ನಿವೇನು ಮಾಡುತ್ತೀರಿ?
4. ಮುಖಂಡನಲ್ಲಿ ಇರಬೇಕಾದ ಸ್ವಾಭಾವಿಕ ಚಿಹ್ನೆಗಳು ಯಾವುವು?
5. ನೀನು ಯಾರನ್ನು ಮಹಾಮುಖಂಡನೆಂದು ಕರೆಯುತ್ತೀ? ಏಕೆ?
6. ಸಂವೇದನೆಶೀಲತೆಯಲ್ಲಿ ಬೆಳೆಯುವ ಅಗತ್ಯವೇನು?
7. ಪ್ರೇರಿತ ಜನನವು ಏನನ್ನು ನಿರ್ಧರಿಸುತ್ತದೆ.

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಮಾನವ ಹಕ್ಕುಗಳ ಯಾವುದಾದರೂ ಐದು ಗುಣಲಕ್ಷಣಗಳನ್ನು ಬರೆಯಿರಿ.
2. ಗೆಳತನವನ್ನು ಉಳಿಸಿಕೊಳ್ಳಲು ಯಾವ ಯಾವ ಅಂಶಗಳನ್ನು ಗಮನಿಸುವುದು ಅಗತ್ಯ
3. ನಾಲ್ಕು ವಿಧದ ಜನನವನ್ನು ಬರೆದು ಅವುಗಳನ್ನು ನಿನ್ನ ಸ್ವಂತ ಮಾತಿನಲ್ಲಿ ವಿವರಿಸು.
4. ಸಮಯದ ಉಪಯುಕ್ತ ಬಳಕೆಯ ಯೋಜನೆಯನ್ನು ನಾವು ಯಾವ ರೀತಿ ಮಾಡಿಕೊಳ್ಳಬೇಕು
5. ಮುಖಂಡತ್ವದ ಅಗತ್ಯ ಲಕ್ಷಣಗಳಾವುವು?
6. ದೈನಂದಿನ ಜೀವನದಲ್ಲಿ ದೀನತೆಯ ಏಳು ವಿಭಾಗಗಳು ಮತ್ತು ಅದರ ಕ್ರಿಯಾತ್ಮಕತೆಯ ಬಗ್ಗೆ ನಿನ್ನ ಸ್ವಂತ ವಾಕ್ಯದಲ್ಲಿ ವಿವರಿಸು.
7. ಗೆಳತನವನ್ನು ಕಾಪಾಡುವ ಸೂತ್ರಗಳಾವುವು? ಮತ್ತು ಅವುಗಳನ್ನು ವಿವರಿಸು.

**VIII. ಯಾವುದಾದರೂ ಎರಡು ವಿಷಯಗಳ ಬಗ್ಗೆ ವಿವರಿಸಿ ಬರೆಯಿರಿ: 2x5=10**

1. ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಸಾಧಿಸಬೇಕು
2. ಸಮಯ ಪ್ರಜ್ಞೆ
3. ಗೆಳತನ

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ರಾಜು 10ನೇ ತರಗತಿಯ ವಿದ್ಯಾರ್ಥಿ. ಒಂದು ದಿನ ಅವನು ಶಾಲೆಗೆ ಹೋಗುತ್ತಿರುವಾಗ